

ಶಶಿಧರ್

ತೆರಿಗೆ ಮತ್ತು ಹೆರಿಗೆಯಲ್ಲಿ ವ್ಯತ್ಯಾಸ ಏನು?

ಆದಾಯ ಹೆಚ್ಚಾದರೆ ತೆರಿಗೆ ಮತ್ತು ಪ್ರೀತಿ ಹೆಚ್ಚಾದರೆ ಹೆರಿಗೆ.

'ಕ್ವಿಟ್ ಇಂಡಿಯಾ' ಅನುಸರಿಸಿದ ನೇತಾರರಲ್ಲಿ ನಾಲ್ವರ ಹೆಸರು ಹೇಳಿರಿ?

ವಿಜಯ ಮಲ್ಯ, ಲಲಿತ್ ಮೋದಿ, ನೀರವ ಮೋದಿ ಮತ್ತು ಮೆಹುಲ್ ಚೋಕ್ಸಿ.

***

ಸತ್ತ ಮೇಲೂ ಹೆಸರು ಶಾಶ್ವತವಾಗಿ ಇರಲು ಏನು ಮಾಡಬೇಕು?

ಊರ ತುಂಬಾ ಸಾಲ ಮಾಡಬೇಕು ಅಥವಾ ಒಂದೆರಡು ಕೊಲೆ ಮಾಡಬೇಕು.

***

ನಿದ್ರೆಯ ವಿಶೇಷ ಏನು?

ಬಂದರೆ ಸಾರಾಯಿಯಂತೆ ಎಲ್ಲವನ್ನೂ ಮರೆಸುತ್ತದೆ. ಇಲ್ಲವಾದರೆ ಎಲ್ಲವನ್ನೂ ನೆನಪಿಸುತ್ತದೆ.

***

ವಿಪರ್ಯಾಸದ ಉದಾಹರಣೆ ಕೊಡಿ?

ಕುದುರೆ ಬಾಲಕ್ಕೆ ಬೆಟ್ಟಿಂಗ ಮಾಡಿದರೆ ಓಕೆ. ಕ್ರಿಕೆಟ್ ಬಾಲ್‌ಗೆ ಬೆಟ್ಟಿಂಗ್ ಮಾಡಿದರೆ ಅಪರಾಧ.

***

ಮದುವೆಮನೆಯಲ್ಲಿ ಯಾರ ದೃಷ್ಟಿ ಯಾರ ಮೇಲೆ ಇರುತ್ತದೆ? ಮಹಿಳೆಯರ ದೃಷ್ಟಿ ಇನ್ನೊಬ್ಬರ ಸೀರೆ ಮೇಲೆ ಇದ್ದರೆ, ಅವರ ದಂಡಂದಿರ ದೃಷ್ಟಿ ಇನ್ನೊಬ್ಬರ ಹೆಂಡಂದಿರ ಮೇಲೆ.

***

ನೇಣಿನ ಒಂದು ಗಂಟಿಗೂ ಮತ್ತು ತಾಳಿಯ ಮೂರು ಗಂಟಿಗೂ ವ್ಯತ್ಯಾಸ ಏನು?

ಒಂದು ಶಾಶ್ವತ ವಿಮೋಚನೆ ನೀಡಿದರೆ, ಇನ್ನೊಂದು ಜೀವನ ಪರ್ಯಂತ ಯಾತನೆ ನೀಡುತ್ತದೆ.

***

ಕೊರೊನಾ ನಂತರದ ಬದುಕು ಹೇಗಿರುತ್ತದೆ?

ನೆಟ್ ಇರುತ್ತದೆ, ಅದರೆ ಸ್ಪೀಡ ಇರುವುದಿಲ್ಲ

ಶುಲ್ಕ ಇರುತ್ತದೆ, ಆದರೆ ಕ್ಲಾಸ್ ಇರುವುದಿಲ್ಲ.

ಹಳಿ ಇರುತ್ತದೆ, ಅದರೆ ಮೆಟ್ರೋ ಇರುವುದಿಲ್ಲ.

ಹಸಿವೆ ಇರುತ್ತದೆ, ಆದರೆ ಹಣ ಇರುವುದಿಲ್ಲ

ಆಸ್ಪತ್ರೆ ಕಿರುತ್ತದೆ, ಆದರೆ ಬೆಡ್ ಇರುವುದಿಲ್ಲ.

***

ಅಮೆರಿಕಾ ಚುನಾವಣೆಯ ವಿಶೇಷ ಏನು?

ರಾಜಕೀಯ ಎನ್ನುವ ಇಸ್ಪೀಟ್ ಆಟದಲ್ಲಿ , ನಿನ್ನ ಬಳಿ ಟ್ರಂಪ್ ಕಾರ್ಡ್ ಇದ್ದರೂ, ಗೆಲ್ಲಲು ನಾ ಬಿಡೆನ್.

(ಸಂಗ್ರಹ)

ರಮಾನಂದ ಶರ್ಮಾ, ಬೆಂಗಳೂರು

ದಿನಾ ಕುಡಿದು ಮನೆಗೆ ಹೋದರೆ ಹೆಂಡತಿ ಬಯ್ತಾಳಯ್ಯ ಅದ್ಕೆ ಬಿಟ್ಟುಬಿಟ್ಟೆ

ಗುಡ್ ಕುಡಿಯುವುದನ್ನು ಅಂತೂ ಬಿಟ್ಯಾ?

ಅಲ್ಲಯ್ಯಾ ಹೆಂಡ್ತಿನ...

***

ಮೇಷ್ಟ್ರು ಹೋಮ್ ವರ್ಕ್ ಯಾಕೆ ಮಾಡಲಿಲ್ಲ?

ವಿದ್ಯಾರ್ಥಿ ಹೇಗೆ ಮಾಡಲಿ ಸಾರ್ ನಾನಿರುವುದು ಹಾಸ್ಟೆಲಿನಲ್ಲಿ.

***

ಕ್ರೀಡಾಳು ಜ್ವರದಿಂದ ನರಳುತ್ತಿದ್ದ ಡಾಕ್ಟರ್ ಅವನನ್ನು ಪರೀಕ್ಷಿಸುತ್ತಿದ್ದರು.

ಕ್ರೀಡಾಳು ಎಷ್ಟಕ್ಕೆ ಏರಿದೆ ಜ್ವರ ಡಾಕ್ಟರ್?

ಡಾಕ್ಟರ್: 101 ಡಿಗ್ರಿ

ಕ್ರೀಡಾಳು: ಈ ವಿಷಯದಲ್ಲಿ ವರ್ಲ್ಡ್ ರೆಕಾರ್ಡ್ ಎಷ್ಟು ಡಾಕ್ಟರ್?

***

ಪೂಜಾರಿ: ಗುಂಡ ನಿನ್ನ ಹೆಸರಿನಲ್ಲಿ ದೇವರ ಪೂಜೆ ಮಾಡುತ್ತೇನೆ ನೀನು ಹುಟ್ಟಿದ ನಕ್ಷತ್ರ ಯಾವುದು?

ಗುಂಡ: ನಾನು ಹುಟ್ಟಿದ್ದು ಹಗಲಿನಲ್ಲಿ ಆಗ ನಕ್ಷತ್ರಗಳೇ ಇರಲಿಲ್ಲ.

***

ಗುಂಡ: ಇವತ್ತು ಹತ್ತು ಸಾವಿರ ಸಿಗದಿದ್ದರೆ ವಿಷ ಕುಡಿಯುತ್ತೇನೆ ಸಹಾಯ ಮಾಡ್ತಿರಾ?

ಸಿಂಗ: ಹತ್ತು ಸಾವಿರ ಇಲ್ಲ ವಿಷ ಕೊಳ್ಳಲು ಸಹಾಯ ಮಾಡುತ್ತೇನೆ!

***

ಮಾಲೀಕ: ಯಾವ ವ್ಯಕ್ತಿ ತನ್ನ ಮಾತನ್ನು ಇತರರಿಗೆ ಅರ್ಥವಾಗುವಂತೆ ಹೇಳುವುದಿಲ್ಲವೋ ಅವನು ಮೂರ್ಖನೇ ಸೇರಿ

ನೌಕರ: ನಿಮ್ಮ ಮಾತು ನನಗೆ ಅರ್ಥವಾಗಲಿಲ್ಲ ಸಾರ್!

***

ಮಗಳು: ದರ್ಶಿನಿ ಎಂದರೇನು?

ಅಪ್ಪ: ಇದು ಒಂದು ತರ ಹೋಟೆಲ್, ತಿನ್ನುವವರು ಬೀದಿಯಲ್ಲಿ ಓಡಾಡುವವರನ್ನೆಲ್ಲಾ ನೋಡಬಹುದು. ಹಾಗೆಯೇ ಬೀದಿಯಲ್ಲಿ ಓಡಾಡುವವರೆಲ್ಲಾ ತಿನ್ನುವವರನ್ನು ನೋಡಬಹುದು ಇದೇ ದರ್ಶಿನಿ!

***

ನೀವು ತುಂಬಾ ಸಂತೋಷದಿಂದ ಇರುವಂತೆ ಕಾಣುತ್ತಿದೆ ಇದರ ಗುಟ್ಟೇನು? ವಯಸ್ಸಾದಂತೆ ಕಾಣುವ ವ್ಯಕ್ತಿಯನ್ನು ಕೇಳಿದ.

ಅವನು: ನಾನು ದಿನಾ ಮೂರು ಪ್ಯಾಕೆಟ್ ಸಿಗರೇಟು ಒಂದು ಬಾಟಲ್ ವಿಸ್ಕಿ ಕುಡಿತೀನಿ. ಮತ್ತೆ ಎಲ್ಲ ಸಮಯದಲ್ಲಿ ಏನನ್ನಾದರೂ ತಿನ್ನುತ್ತಿರುತ್ತೇನೆ. ವ್ಯಾಯಾಮ ಅದು ಇದು ಅಂಥ ಟೈಮ್ ವೇಸ್ಟ್ ಮಾಡಲ್ಲ.

ಆಶ್ಚರ್ಯದಿಂದ ಹಾಗಾದರೆ ನಿಮ್ಮ ವಯಸ್ಸು ಎಷ್ಟು?

ಅವನು. ಮೂವತ್ತು ಎಂದ

ನಿಜವಾಗಿಯೂ ಆಶ್ಚರ್ಯವೇ!

***

ಗುಂಡ: ಕಾವೇರಿ ಯಾವ ಸಂಧಿ?

ಕರ್ನಾಟಕಕ್ಕೆ ಲೋಪ ಸಂಧಿ

ತಮಿಳುನಾಡಿಗೆ ಆಗಮ ಸಂಧಿ

ಕೋರ್ಟಿಗೆ ಆದೇಶ ಸಂಧಿ ಸಾರ್

(ಸಂಗ್ರಹ)

ಬಿ ಆರ್ ಉಷಾ ಬೆಂಗಳೂರು

ಗುಂಡ, ಹೆಂಡತಿಯ ಹುಟ್ಟು ಹಬ್ಬಕ್ಕೆ ಸೀರೆ ಕೊಡಿಸೋಕೆ ಅಂತ ಅಂಗಡಿಗೆ ಹೋಗ್ತಾನೆ.

ತಾನೇ ಕೊಂಡು ತಂದರೆ ಮತ್ತೆ ಮತ್ತೆ ಬದಲಾಯಿಸು ಗೊಂದಲ ಬರುತ್ತೋ ಅಂತ ಹೆಂಡತಿಯ ಜೊತೆಗೇ ಹೋಗ್ತಾನೆ.

ಅಂಗಡಿಯಾತ: ಎಷ್ಟು ಬೆಲೆ ಸೀರೆ ತೋರಿಸಲಿ ಸಾರ್

ಗುಂಡ: ಅಂದಾಜು 2000 ರೂಪಾಯಿದು.

ಅಂಗಡಿಯಾತ: ಹಲವಾರು ಸೀರೆ ತೋರಿಸ್ತಾನೆ

ಗುಂಡನ ಪತ್ನಿಗೆ ಯಾವುದು ಇಷ್ಟವಾಗೋಲ್ಲ.

ಗುಂಡ: ಅಂಗಡಿಯಾತನ ಕುರಿತು, ಪಕ್ಕದ ಗೂಡಿನತ್ತ ಕೈ ತೋರಿಸಿ, ಅದರಲ್ಲಿ ಒಂದು ತೋರಿಸಿ ನೋಡೋಣ ಎಂದಾಗ

ಅಂಗಡಿಯಾತ: ಸರ್ ಅದು ವಿತೌಟ್ ಬ್ಲೌಸ್ ಸರ್!

ಗುಂಡ: (ಒಂದು ಕ್ಷಣವೂ ಯೋಚಿಸದೆ) ಥೂ, ಬ್ಲೌಸ್ ಇಲ್ಲದ ಸೀರೆ ಬೇಡಾರಿ..... ಅದೆಂಗೆ ಉಡ್ತಾರೆ?

ಆಗ ಅಂಗಡಿಯಾತ: ವಿತೌಟ್ ಬ್ಲೌಸ್ ವಿಶೇಷ ವಿವರಿಸಿದಾಗ

ಗುಂಡ: ಹೌದಾ, ಅದು ಆ ತರಾನಾ? ಎಂದು ಹೆಂಡತಿ ಮುಖ ನೋಡ್ತಾನೆ.

ಹೆಂಡತಿ: ಗುಂಡನಿಗೆ ರೀ. ಸುಮ್ನೆ ಇರಿ, ನಿಮಗೆ ಅವೆಲ್ಲ ಅರ್ಥ ಆಗೋಲ್ಲ ಅಂತಾಳೆ.

(ಸಂಗ್ರಹ) ರಾಜೀವ್ ಎನ್. ಮಾಗಲ್,

ಸಕಲೇಶಪುರ